**<u>ಮಾನ್ಯ ಗೌರವಾನ್ವಿತ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ಆಳಂದ</u>**

**<u>ಸಿ.ಸಿ. ನಂ. 6566/2024</u>**

**<u>ಆರೋಪಿತನ ಹೆಸರು</u>**

1. ದತ್ತಪ್ಪ ತಂದೆ ಶಿವಲಿಂಗಪ್ಪ ಬಳೂರ್ಗಿ(ತಾಯಿ ಶರಣವ್ವ),
   ವಃ 65 ವರ್ಷ, ಉಃ ಒಕ್ಕಲುತನ,

2. ಸಾಂಬಾಯಿ ಗಂಡ ದತ್ತಪ್ಪ ಬಳೂರ್ಗಿ,
   ವಃ 57 ವರ್ಷ, ಉಃ ಕೂಲಿ ಕೆಲಸ,

   ಇಬ್ಬರು ಸಾಃ ಝುಳಕಿ(ಕೆ) ಗ್ರಾಮ, ತಾಃ ಆಳಂದ.

**ಃ ಆ ವಾ ದ ನೆ ಃ**

ದಿನಾಂಕ 04.09.2024 ರಂದು 8.30 ಎ.ಎಂ.ಗೆ ಮಾದನ ಹಿಪ್ಪರಗಾ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಝುಳಕಿ(ಕೆ) ಗ್ರಾಮದಲ್ಲಿ, ಸಾಕ್ಷಿ ನಂ.1 ಮತ್ತು 4 ರವರು ಕಲಬುರಗಿಯಲ್ಲಿ ನಡೆಯುವ ಧರ್ಮಸ್ಥಳದ ಕಾರ್ಯಕ್ರಮಕ್ಕೆ ಹೋಗಬೇಕೆಂದು ಸಾಕಿ ನಂ.5 ರವರ ಮನೆಯ ಮುಂದಿನ ರಸ್ತೆಯಲ್ಲಿ ನಿಂತಾಗ, 1ನೇ ಆರೋಪಿತನಾದ ನೀವು ಸಾಕ್ಷಿ ನಂ.1 ಮತ್ತು 4 ರವರಿಗೆ "*ಏ ರಂಡೆರ್ಯಾ ನನ್ನ ಹೆಂಡತಿ ಸಂಗಡ ಕೂಲಿ ವಿಷಯವಾಗಿ ಜಗಳ ಮಾಡತಿ* " ನಂತರ ಸಾಕ್ಷಿ ನಂ.5 ರವರು ಜಗಳ ಬಿಡಿಸಲು ಬಂದಾಗ 1ನೇ ಆರೋಪಿತರಾದ ನೀವು ಸಾಕ್ಷಿ ನಂ.5 ರವರಿಗೆ "*ಬೋಸಡಿ ನಿನಗೆ ಸೊಕ್ಕು ಬಂದಾದ* " ಅಂತಾ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ, 2ನೇ ಆರೋಪಿತಳಾದ ನೀವು ಸಾಕ್ಷಿ ನಂ.4 ರವರಿಗೆ "*ರಂಡಿ, ಬೋಸಡಿ*" ಅಂತಾ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದಾಗ ಸಾಕ್ಷಿ ನಂ.1 ನೇದ್ದವರು ಈ ರೀತಿ ರಸ್ತೆಯಲ್ಲಿ ನಿಂತು ಹೆಣ್ಣು ಮಕ್ಕಳಿಗೆ ಬೈಯುವುದು ಸರಿಯಲ್ಲ ಅಂತಾ ಹೇಳಿ ಅಲ್ಲಿಂದ ಹೋಗುತ್ತಿರುವಾಗ, 1ನೇ ಆರೋಪಿತನಾದ ನೀವು ನೀವು ಸಾಕ್ಷಿ ನಂ.1 ರವರಿಗೆ ಅಕ್ರಮವಾಗಿ ತಡೆದು ಅವರನ್ನು ಕಾನೂನಾತ್ಮಕವಾಗಿ ಚಲಿಸಲು ಬಿಡದಂತೆ ಮಾಡಿರುತ್ತೀರಿ, ಆ ಮೂಲಕ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ 126(2) ಸಹ ಕಲಂ 3(5)** ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ಎರಡನೇಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ, 1ನೇ ಆರೋಪಿತನಾದ ನೀವು ಸಾಕ್ಷಿ ನಂ.1 ರವರಿಗೆ ಕೈನಿಂದ ಕಿವಿ ಮತ್ತು ತಲೆಯ ಮೇಲೆ ಜೋರಾಗಿ ಹೊಡೆದು ಗುಪ್ತಗಾಯ ಮಾಡಿರುತ್ತೀರಿ, ಆ ಮೂಲಕ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ 115(2) ಸಹ ಕಲಂ 3(5)** ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ಕೊನೆಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ, 1ನೇ ಆರೋಪಿತನಾದ ನೀವು ಸಾಕ್ಷಿ ನಂ.5 ರವರ ಸೀರೆ ಮತ್ತು ಕುಪ್ಪಸ ಹಿಡಿದು ಎಳೆದಾಡಿ ನಂತರ ಕೈಯಿಂದ ತಳ್ಳಿರುತ್ತೀರಿ, 2ನೇ ಆರೋಪಿತಳಾದ ನೀವು ಸಾಕ್ಷಿ ನಂ.4 ರವರ ಸೀರೆ ಹಿಡಿದು ಎಳೆದಾಡಿ ಅವಮಾನ ಮಾಡಿ ಮಾನಭಂಗಕ್ಕೆ ಯತ್ನಿಸಿರುತ್ತೀರಿ, ಆ ಮೂಲಕ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ 74 ಸಹ ಕಲಂ 3(5)** ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಆರೋಪ ಇರುತ್ತದೆ, ನೀವು ಏನು ಹೇಳುವಿರಿ.

ಪ್ರಶ್ನೆ ಃ ಈ ಮೇಲೆ ಓದಿ ಹೇಳಿದ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ: ಆ-1:

ಆ-2:

ಪ್ರಶ್ನೆ ಃ ಸದರ ಆಪಾದನೆಗೆ ನೀನು ಒಪ್ಪುತ್ತಿಯಾ ಅಥವಾ ವಿಚಾರಣೆಯಾಗಬೇಕೋ?

ಉತ್ತರ: ಆ-1:

ಆ-2:

(ಆರೋಪಿಗೆ ಆಪಾದನೆಯ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಓದಿ ಹೇಳಿ ವ ಕೇಳಿ ಅವರು ಅದನ್ನು ತಿಳಿದುಕೊಂಡು ನಂತರ ಕೊಟ್ಟ ಉತ್ತರವನ್ನು ನಮೂದಿಸಲಾಯಿತು)

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ.ಎಫ್.ಸಿ.**
**ನ್ಯಾಯಾಲಯ, ಆಳಂದ.**